ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 19-6-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಮನೆಯಂಗಳದಲ್ಲಿ ಮಾತುಕತೆ:<br><br>ತಿಂಗಳ ಅತಿಥಿ:<br><br>ಎಲ್. ಬಿ. ಕೆ. ಆಲ್ದಾಳ್,<br>ಹಿರಿಯ ರಂಗಕರ್ಮಿಗಳು | 20-06-2015<br>ಶನಿವಾರ<br>ಸಂಜೆ<br>4-00 ಗಂಟೆಗೆ | ನಯನ ಸಭಾಂಗಣ,<br>ಕನ್ನಡ ಭವನ<br>ಜೆ.ಸಿ. ರಸ್ತೆ, ಬೆಂಗಳೂರು |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಗ್ರಾಹಕ ಉತ್ಪನ್ನಗಳ ಗುಣಮಟ್ಟ ಕಾಯಲು ಪ್ರಾಧಿಕಾರ ರಚನೆ:

### - ಕೇಂದ್ರ ಆಹಾರ ಸಚಿವ ರಾಮ್ ವಿಲಾಸ್ ಪಾಸ್ವಾನ್.

ಬರುವ ದಿನಗಳಲ್ಲಿ ಆಹಾರ ಹಾಗೂ ಇತರೆ ಅಗತ್ಯ ಗ್ರಾಹಕ ಉತ್ಪನ್ನಗಳ ಮೇಲೆ ಐಎಸ್ಐ (ISI) ಮುದ್ರೆಯನ್ನು ಕಡ್ಡಾಯಗೊಳಿಸಲಾಗುವುದು. ನಿಯಮ ಉಲ್ಲಂಘಿಸಿದವರ ವಿರುದ್ದ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರ ಆಹಾರ, ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರಾದ ರಾಮ್ ವಿಲಾಸ್ ಪಾಸ್ವಾನ್ ಅವರು ತಿಳಿಸಿದರು.

ಇಂದು ಭಾರತೀಯ ಆಹಾರ ನಿಗಮದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಅಗತ್ಯ ಗ್ರಾಹಕ ಉತ್ಪನ್ನಗಳ ಗುಣಮಟ್ಟ ಪರಿಶೀಲನೆಗೆ

ಪ್ರಾಧಿಕಾರವೊಂದನ್ನು ರಚಿಸಲಾಗುವುದು. ಕಳಪೆ ಗುಣಮಟ್ಟದ ಉತ್ಪನ್ನ ಕಂಡುಬಂದಲ್ಲಿ ಅಂತಹ ಉತ್ಪನ್ನಗಳನ್ನು ಮಾರುಕಟ್ಟೆಯಿಂದ ತೆಗೆದುಹಾಕುವ ಅಧಿಕಾರವನ್ನು ಈ ಪ್ರಾಧಿಕಾರ ಹೊಂದಲಿದೆ ಎಂದವರು ತಿಳಿಸಿದರು. ಇದೇ ರೀತಿ ಚಿನ್ನದ ಒಡವೆಗಳ ಮೇಲೆ ಹಾಲ್‌ಮಾರ್ಕ್ ಚಿನ್ಹೆಯನ್ನು ಇನ್ನು ಮುಂದೆ ಕಡ್ಡಾಯಗೊಳಿಸಲಾಗುವುದೆಂದರು.

ಗುರುವಾರ ರಾಜ್ಯದ ಮುಖ್ಯಮಂತ್ರಿಗಳೊಂದಿಗೆ ಕಬ್ಬು ಬೆಳೆಗಾರರ ಹಾಗೂ ಸಕ್ಕರೆ ಕಾರ್ಖಾನೆ ಮಾಲೀಕರ ಕುಂದು ಕೊರತೆಗಳ ಬಗ್ಗೆ ಧೀರ್ಘವಾಗಿ ಚರ್ಚಿಸಲಾಗಿದೆ ಎಂದ ಕೇಂದ್ರ ಸಚಿವರು, ಕಬ್ಬಿನ ಬೆಂಬಲ ಬೆಲೆಯನ್ನು ಕೇಂದ್ರವು ನಿಗದಿಪಡಿಸುತ್ತದೆ ಎಂದರು. ಅದರ ಮೇಲೆ ರಾಜ್ಯ ಸರ್ಕಾರಗಳು ಹೆಚ್ಚುವರಿ ಬೆಲೆ ವಿನಾಯಿತಿ ನೀಡಲು ಅವಕಾಶ ಇರುತ್ತದೆ. ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆ ಮಾಲೀಕರಿಂದ ನೀಡಬೇಕಾದ ಬಾಕಿ ಹಣದ ಬಗ್ಗೆ ಕೇಂದ್ರ ಸರ್ಕಾರ ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ. ಬೆಂಬಲ ಬೆಲೆ ನಿಗದಿ ಪಡಿಸುವುದಷ್ಟೇ ಕೇಂದ್ರದ ಕೆಲಸ. ಕಾರ್ಖಾನೆ ಮಾಲೀಕರು ಹಾಗೂ ರಾಜ್ಯ ಸರ್ಕಾರವೇ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂದರು.

ಕರ್ನಾಟಕ ರಾಜ್ಯದಲ್ಲಿ ಈ ಸಾಲಿಗೆ 7 ಲಕ್ಷ ಟನ್ ಗೋದಿ, ಹಾಗೂ 19 ಲಕ್ಷ ಟನ್ ಅಕ್ಕಿ ಸೇರಿದಂತೆ ಒಟ್ಟು 26 ಲಕ್ಷ ಟನ್ ಆಹಾರ ಧಾನ್ಯದ ಬೇಡಿಕೆಯಿದೆ ಎಂದು ತಿಳಿಸಿದರು. ಆಹಾರ ಖಾತ್ರಿ ಕಾಯ್ದೆಯಡಿ ಕರ್ನಾಟಕದ ಶೇ. 80ರಷ್ಟು ಗ್ರಾಮೀಣ ಹಾಗೂ ಶೇ. 60ರಷ್ಟು ನಗರ ಪ್ರದೇಶದ ಜನಸಂಖ್ಯೆ ಸೇರಿ 4.75 ಕೋಟಿ ಜನರು ಸೇರ್ಪಡೆಯಾಗಿದ್ದಾರೆ ಎಂದ ಅವರು ಕೇಂದ್ರವು ಒಂದು ವರ್ಷಕ್ಕೆ ಪಡಿತರ ವಿತರಣೆಗೆ ಸುಮಾರು 6,777 ಕೋಟಿಯಷ್ಟು ಸಬ್ಸಿಡಿ ಹಣ ನೀಡುತ್ತಿದೆ ಎಂದರು. ದೇಶದ ಈ ಸಾಲಿನ ಆಹಾರ ಧಾನ್ಯ ಬೇಡಿಕೆಯಷ್ಟು ದಾಸ್ತಾನು ಈಗಾಗಲೇ ಕೇಂದ್ರದಲ್ಲಿ ಇದ್ದು, ಆಹಾರಧಾನ್ಯದ ಯಾವುದೇ ಕೊರತೆ ಇಲ್ಲ ಎಂದು ಸಚಿವರು ತಿಳಿಸಿದರು.

ರಾಜ್ಯದ ಆಹಾರ ಸಚಿವ ದಿನೇಶ್ ಗುಂಡೂರಾವ್ ಅವರೊಂದಿಗೆ ಚರ್ಚಿಸಿ ರಾಜ್ಯದಲ್ಲಿ ಗ್ರಾಹಕರ ನ್ಯಾಯಾಲಯಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಿ ಗ್ರಾಹಕರ ವೇದಿಕೆಯನ್ನು ಬಲಪಡಿಸಲು ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ ಎಂದರು.

ಬರುವ ಜುಲೈ 7ರಂದು ದೇಶದ ಎಲ್ಲ ಆಹಾರ ಹಾಗೂ ನಾಗರೀಕ ಸರಬರಾಜು ಸಚಿವರುಗಳ ಸಭೆಯನ್ನು ಕರೆದು ಆಹಾರ ದಾಸ್ತಾನು, ಮತ್ತಿತರ ವಿಷಯಗಳ ಬಗ್ಗೆ ಚರ್ಚಿಸಲಾಗುವುದು ಎಂದು ಅವರು ತಿಳಿಸಿದರು.

# ಸಚಿವ ಸಂಪುಟ ಸಭೆ

**ಬೆಂಗಳೂರು, ಜೂನ್ 19 (ಕರ್ನಾಟಕ ವಾರ್ತೆ)**

**ರಾಜ್ಯ ಸಚಿವ ಸಂಪುಟ ಸಭೆಯು ಜೂನ್ 20 ರಂದು ಬೆಳಿಗ್ಗೆ 11-00 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಮಂದಿರದಲ್ಲಿ ನಡೆಯಲಿದೆ.**

**ಬಾಬು:ಜಿಪಿಆರ್.**

# ಒಂದು ದಿನದ ಉಚಿತ ತರಬೇತಿ

**ಬೆಂಗಳೂರು, ಜೂನ್ 19 (ಕರ್ನಾಟಕ ವಾರ್ತೆ)**

ಮೈಸೂರು ತೋಟಗಾರಿಕಾ ಸಂಘವು ಜೂನ್ 20 ರಂದು ಮಧ್ಯಾಹ್ನ 2-00 ರಿಂದ 5-00 ರವರೆಗೆ ಬೆಂಗಳೂರಿನ ಲಾಲ್‌ಬಾಗ್‌ನ ಡಾ. ಎಂ. ಹೆಚ್. ಮರೀಗೌಡ ಸ್ಮಾರಕ ಸಭಾಂಗಣದಲ್ಲಿ ಒಂದು ದಿನದ ತೋಟಗಾರಿಕಾ ತರಬೇತಿ ಏರ್ಪಡಿಸಿದೆ.

ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಕಾರ್ಯದರ್ಶಿ, ಮೈಸೂರು ತೋಟಗಾರಿಕಾ ಸಂಘ, ಲಾಲ್‌ಬಾಗ್, ಬೆಂಗಳೂರು - 560 004 ಅಥವಾ ದೂರವಾಣಿ ಸಂಖ್ಯೆ 080 - 26576781 ಅಥವಾ ಮೊಬೈಲ್ 9845803474 ಅನ್ನು ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್.

# ವಿಧಾನ ಪರಿಷತ್ ಅಧಿವೇಶನ

ಬೆಂಗಳೂರು,ಜೂ.19 (ಕರ್ನಾಟಕ ವಾರ್ತೆ) :

ರಾಜ್ಯ ವಿಧಾನ ಪರಿಷತ್ ಅಧಿವೇಶನವು 29ನೇ ಜೂನ್, 2015 ರ ಸೋಮವಾರ ಮಧ್ಯಾಹ್ನ 12.00 ಗಂಟೆಗೆ ಬೆಳಗಾವಿಯ ಸುವರ್ಣ ವಿಧಾನ ಪರಿಷತ್ ಸಭಾಂಗಣದಲ್ಲಿ ಹಾಗೂ 13ನೇ ಜುಲೈ 2015 ರ ಸೋಮವಾರ ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ ಸಭಾಂಗಣದಲ್ಲಿ ಸಮಾವೇಶಗೊಳ್ಳಲಿದೆ ಎಂದು ಕರ್ನಾಟಕ ವಿಧಾನ ಪರಿಷತ್ ಕಾರ್ಯದರ್ಶಿ ಎಂ. ಶ್ರೀಶ್ ಅವರು ತಿಳಿಸಿದ್ದಾರೆ.

**ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ :-** ಜೂನ್.29 ಸರ್ಕಾರಿ ಕಾರ್ಯಕಲಾಪ, ಜೂ.30 ಸರ್ಕಾರಿ ಕಾರ್ಯಕಲಾಪ, ಜು.01- ಸರ್ಕಾರಿ ಕಾರ್ಯಕಲಾಪ, ಜು.02- ಸರ್ಕಾರಿ/ಖಾಸಗಿ ಕಾರ್ಯಕಲಾಪ, ಜು.03- ಸರ್ಕಾರಿ ಕಾರ್ಯಕಲಾಪ, ಜು.04- ಕಾರ್ಯಕಲಾಪ ಇರುವುದಿಲ್ಲ, ಜು.05- ಸಾರ್ವತ್ರಿಕ ರಜಾ ದಿನ, ಜು.06- ಸರ್ಕಾರಿ ಕಾರ್ಯಕಲಾಪ, ಜು.07- ಸರ್ಕಾರಿ ಕಾರ್ಯಕಲಾಪ, ಜು.08- ಸರ್ಕಾರಿ ಕಾರ್ಯಕಲಾಪ, ಜು.09- ಸರ್ಕಾರಿ/ಖಾಸಗಿ

ಕಾರ್ಯಕಲಾಪ, ಜು.10– ಸರ್ಕಾರಿ ಕಾರ್ಯಕಲಾಪ, ಜು.11– ರಜಾದಿನ, ಜು.12– ಸಾರ್ವತ್ರಿಕ ರಜಾದಿನ,

**ಬೆಂಗಳೂರಿನ ವಿಧಾನಸೌಧದಲ್ಲಿ** :– ಜು.13– ಸರ್ಕಾರಿ ಕಾರ್ಯಕಲಾಪ, ಜು.14– ಸರ್ಕಾರಿ ಕಾರ್ಯಕಲಾಪ, ಜು.15– ಸರ್ಕಾರಿ ಕಾರ್ಯಕಲಾಪ, ಜು.16– ಸರ್ಕಾರಿ/ಖಾಸಗಿ ಕಾರ್ಯಕಲಾಪ, ಜು.17– ಸರ್ಕಾರಿ ಕಾರ್ಯಕಲಾಪ, ಜು.18– ಸಾರ್ವತ್ರಿಕ ರಜಾದಿನ, ಜು.19– ಸಾರ್ವತ್ರಿಕ ರಜಾದಿನ, ಜು.20– ಸರ್ಕಾರಿ ಕಾರ್ಯಕಲಾಪ, ಜು.21– ಸರ್ಕಾರಿ ಕಾರ್ಯಕಲಾಪ, ಜು.22– ಸರ್ಕಾರಿ/ ಕಾರ್ಯಕಲಾಪ, ಜು.23– ಸರ್ಕಾರಿ ಕಾರ್ಯಕಲಾಪ, ಜು.24– ಖಾಸಗಿ/ ಸರ್ಕಾರಿ ಕಾರ್ಯಕಲಾಪ.

ಬಾಬು:ಜಿಪಿಆರ್

## ಮುಂಬಡ್ತಿ

ಬೆಂಗಳೂರು,ಜೂ.19 (ಕರ್ನಾಟಕ ವಾರ್ತೆ) :

ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗೆ ಸೇರಿದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಜಂಟಿ ಕಾರ್ಯದರ್ಶಿ ಶ್ರೀ ಜಿ. ಶ್ರೀಧರ್ ಅವರಿಗೆ ಅದೇ ಇಲಾಖೆಯ ಅಪರ ಕಾರ್ಯದರ್ಶಿಯಾಗಿ ಬಡ್ತಿ ನೀಡಲಾಗಿದೆ.

ಬಾಬು:ಜಿಪಿಆರ್

## ಗೆಜೆಟೆಡ್ ಪ್ರೊಬೇಷನರ್ಸ್ : ಪೂರ್ವಭಾವಿ ಪರೀಕ್ಷೆ ಫಲಿತಾಂಶ

ಬೆಂಗಳೂರು,ಜೂ.19 (ಕರ್ನಾಟಕ ವಾರ್ತೆ) :

ಕರ್ನಾಟಕ ಲೋಕಸೇವಾ ಆಯೋಗವು ಏಪ್ರಿಲ್ 19 ರಂದು ನಡೆಸಿದ 2014 ನೇ ಸಾಲಿನ 464 ಹುದ್ದೆಗಳ ಗೆಜೆಟೆಡ್ ಪ್ರೊಬೇಷನರ್ಸ್ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಗಳ ಪಟ್ಟಿಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in ನಲ್ಲಿ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಮುಖ್ಯ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬೇಕಿದ್ದು, ಮುಖ್ಯ ಪರೀಕ್ಷೆಯ ಅರ್ಜಿಗೆ ಲಾಗ್‌ಇನ್ ಆಗಲು ಅವಶ್ಯವಿರುವ

ವಿವರಗಳನ್ನು ಪೂರ್ವಭಾವಿ ಪರೀಕ್ಷೆಯ ಅರ್ಜಿಯಲ್ಲಿ ನೀಡಲಾದ ನೋಂದಾಯಿತ ಇ-ಮೇಲ್ (ಮಿಂಚಂಚೆ) ಐ.ಡಿ. ಗೆ ಆಯೋಗವು ರವಾನಿಸುವುದು. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ವಿಧಾನದ ಕುರಿತು ಸೂಚನೆಗಳು ಹಾಗೂ ಆನ್‌ಲೈನ್ ಮುಖಾಂತರ ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್

## ಮಹಿಳಾ ಸಾಧಕಿಯರ ಜೀವನ – ಸಾಧನೆಗಳ ಕುರಿತು ಸಾಕ್ಷ್ಯಚಿತ್ರ

ಬೆಂಗಳೂರು,ಜೂ.19 (ಕರ್ನಾಟಕ ವಾರ್ತೆ) :

ನಾಡಿನ ಕಲೆ, ಸಾಹಿತ್ಯ, ಕ್ರೀಡೆ, ಸಾಮಾಜಿಕ ಅಭಿವೃದ್ಧಿ, ವಿಜ್ಞಾನ ಮುಂತಾದ ವಿವಿಧ ಕ್ಷೇತ್ರದಲ್ಲಿ ಅಪ್ರತಿಮ / ವಿಶೇಷ ಸಾಧನೆಗೈದ ಹಾಗೂ ನಾಡಿನ ಶ್ರೆಯೋಭಿವೃದ್ಧಿಗಾಗಿ ಶ್ರಮಿಸಿದ, ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿ ಪಡೆದಿರುವ ಮಹಿಳಾ ಸಾಧಕಿಯರ ಜೀವನ – ಸಾಧನೆಗಳನ್ನು ಕುರಿತು ಜನ ಸಾಮಾನ್ಯರಲ್ಲಿ ಅರಿವು ಮೂಡಿಸಲು ವಿಶೇಷ ಸಾಧನೆ ಮಾಡಿರುವ ಮಹಿಳೆಯರ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಉದ್ದೇಶಿಸಿದೆ.

ಈ ಸಂಬಂಧ ವಿಶೇಷ ಸಾಧನೆಗೈದ ನಾಡಿನ ಮಹಿಳೆಯರು ಸ್ವವಿವರವುಳ್ಳ ಪರಿಚಯ ಪತ್ರ, ಸಾಧನೆಯ ವಿವರ, ಪಡೆದಿರುವ ಪ್ರಶಸ್ತಿಗಳ ವಿವರ ಹಾಗೂ ಇನ್ನಿತರ ಮಾಹಿತಿಗಳೊಂದಿಗೆ ತಮ್ಮ ಅರ್ಜಿಯನ್ನು ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ನಂ. 17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, (ಇನ್‌ಫೆಂಟ್ರಿ ರಸ್ತೆ), ಬೆಂಗಳೂರು – 560 001. ಇಲ್ಲಿಗೆ ದಿನಾಂಕ : 10-07-2015 ರೊಳಗೆ ಕಳುಹಿಸಬಹುದಾಗಿದೆ.

ಪಹೊ:ಜಿಪಿಆರ್.

## ಮಹಿಳಾ ಉದ್ದೇಶಿತ ಆಯ-ವ್ಯಯ : ಕಡ್ಡಾಯ ಪಾಲನೆಗೆ ಸಚಿವರ ಸೂಚನೆ.

ಬೆಂಗಳೂರು ಜೂನ್ 19- (ಕರ್ನಾಟ ವಾರ್ತೆ)

ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳು ತಮ್ಮ ಯೋಜನೆಗಳಲ್ಲಿ ಮಹಿಳಾ ಉದ್ದೇಶಿತ ಆಯ-ವ್ಯಯದ ಸೂಚನೆಯನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಹೇಳಿದ್ದಾರೆ.

ಅವರು ವಿಕಾಸ ಸೌಧದ ಸಮ್ಮೇಳನಾ ಸಭಾಂಗಣದಲ್ಲಿ ಕರೆಯಲಾಗಿದ್ದ ಎಲ್ಲಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದಶಿಗಳು, ಹಾಗೂ ಇಲಾಖಾ ಮುಖ್ಯಸ್ಥರ ಸಭೆಯನ್ನು ಉದ್ಧೇಶಿಸಿ, ಮಾತನಾಡುತ್ತಿದ್ದರು. ಇದುವರೆಗೂ ಲಿಂಗಾಧಾರಿತ ಆಯ-ವ್ಯಯ Gender Budgetದ ಪಾಲನೆಯ ಉಸ್ತುವಾರಿಯನ್ನು ಆರ್ಥಿಕ ಇಲಾಖೆ ನಿರ್ವಹಿಸುತ್ತಿದ್ದು, ಈಗ ಇದನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ವಹಿಸಲಾಗಿದೆ. ಇದೇ ಮೊಟ್ಟ ಮೊದಲ ಬಾರಿಗೆ ಇದಕ್ಕೆ ಸಂಬಂಧಿಸಿದಂತೆ, ಇಲಾಖಾ ಮುಖ್ಯಸ್ಥರ ಸಭೆಯನ್ನು ಕರೆಯಲಾಗಿತ್ತು. ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಉಮಾಶ್ರೀ ಪ್ರತಿಯೊಂದು ಇಲಾಖೆಯು ಮಹಿಳಾಉದ್ದೇಶಿತ ಯೋಜನೆಗಳಿಗೆ ಹಾಗೂ ಕಾರ್ಯಕ್ರಮಗಳಿಗೆ ಸಂಪನ್ಮೂಲಗಳನ್ನು ಒದಗಿಸುವುದರ ಮೂಲಕ ಮಹಿಳೆಯರ ಅಭಿವೃದ್ಧಿ ಹಾಗೂ ಸಬಲೀಕರಣಕ್ಕೆ ಉತ್ತೇಜನಾ ನೀಡಬೇಕೆಂದು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಲಿಂಗಾಧಾರಿತ ಬಜೆಟ್ ಅನ್ನು ಜಾರಿಗೆ ತಂದಿವೆ ಇದನ್ನು ಎಲ್ಲಾ ಇಲಾಖೆಗಳು ಕಡ್ಡಾಯವಾಗಿ ಪಾಲಿಸುವ ಮೂಲಕ ಮಹಿಳ ಸಬಲೀಕರಣವನ್ನು ಉತ್ತೇಜಿಸಬೇಕು ಎಂದು ಅವರು ಹೇಳಿದರು.

ಲಿಂಗಾಧಾರಿತ ಆಯ-ವ್ಯಯದಲ್ಲಿ ಎರಡು ರೀತಿಯ ವರ್ಗೀಕರಣ ಮಾಡಲಾಗಿದೆ. ಎ ವರ್ಗದಲ್ಲಿ ಶೇ. 100ರಷ್ಟು ಅನುದಾನವನ್ನು ಮಹಿಳಾ ಕೇಂದ್ರಿತ ಯೋಜನೆಗಳಿಗೆ ಒದಗಿಸುವುದು. ಬಿ ವರ್ಗದಲ್ಲಿ ಪ್ರತಿಯೊಂದು ಯೋಜನೆಯಲ್ಲೂ ಕನಿಷ್ಠ ಶೇ.30ರಷ್ಟು ಹಾಗೂ ಗರಿಷ್ಠ ಶೇ.99ರಷ್ಟು ಅನುದಾನವನ್ನು

ಮಹಿಳೆಯರಿಗಾಗಿಯೇ ಮೀಸಲಿಟ್ಟು ವೆಚ್ಚಮಾಡಲು ಅವಕಾಶ ಕಲ್ಪಿಸಲಾಗಿದೆ. 2015 ಮತ್ತು 16ನೇ ಸಾಲಿನಲ್ಲಿ ವಿವಿಧ ಇಲಾಖೆಗಳಡಿ 64 ಯೋಜನೆಗಳನ್ನು ಗುರುತ್ತಿಸಲಾಗಿದೆ. ಬಿ ವರ್ಗದಲ್ಲಿ 863 ಯೋಜನೆಗಳನ್ನು ಗುರುತ್ತಿಸಲಾಗಿದೆ. ಈ ಯೋಜನೆಗಳನ್ನು ಇನ್ನು ಮುಂದೆ ಪ್ರತಿಯೊಂದು ಇಲಾಖೆಯೂ ಕಡ್ಡಾಯವಾಗಿ ಪಾಲಿಸಬೇಕು ಎಂದು ಸಚಿವೆ ಉಮಾಶ್ರೀ ಸೂಚನೆ ನೀಡಿದರು.

ಮಹಿಳಾ ಉದ್ದೇಶಿತ ಆಯವ್ಯಯದ ಉದ್ದೇಶ ಈಡೇರಲು ಇಲಾಖಾ ಮುಖ್ಯಸ್ಥರು ಕಾಳಜಿ ವಹಿಸಬೇಕು ಇದನ್ನು ಸರಿಯಾಗಿ ಪಾಲಿಸಲಾಗುತ್ತಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಲು ಮುಖ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಟಾಸ್ಕ್ ಪೋರ್ಸ್ ರಚಿಸಲಾಗಿದೆ ಇದು ಈ ಯೋಜನೆಯ ಪರಿಣಾಮಕಾರಿ  ಅನುಷ್ಠಾನಕ್ಕೆ ನೆರವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಪ್ರತಿಯೊಂದು ಇಲಾಖೆಯು ಮಹಿಳಾ ಫಲಾನುಭವಿಗಳ ಪಟ್ಟಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಒದಗಿಸಬೇಕು. ಮಾಸಿಕ ಪ್ರಗತಿ ಪಟ್ಟಿಯಲ್ಲಿ ಈವರೆಗೆ ಒಟ್ಟು ಫಲಾನುಭವಿಗಳ ಪಟ್ಟಿಯನ್ನು ಮಾತ್ರ ನೀಡಲಾಗುತ್ತಿತ್ತು. ಇನ್ನು ಮುಂದೆ ಲಿಂಗಾಧಾರಿತ ಪಟ್ಟಿಯನ್ನು ಒದಗಿಸಬೇಕೆಂದು ಸಚಿವೆ ಉಮಾಶ್ರೀ ಸೂಚನೆ ನೀಡಿದರು

**ಬಾಬು:ಜಿಪಿಆರ್**

## Karnataka State Information Commission imposed Rs.25,000/- penalty on the then Project Director KSHIP and presently working as Administrator CADA, Munirabad.

The Karnataka State Information Commission heard the case No. KIC 11931 PTN 2012 on 18.06.2015. In this case, the Appellant sought the following information under Sec.

6(1) of the RTI Act 2005 from the Chief Engineer & PIO, PWD, K.R. Circle Bengaluru on 12.09.2012.

- *In respect of the project Karnataka State Highways Improvement Phase I (Rs.2389 crores) and Phases II (4522.5 crores) both aided by the World Bank :*
- *Break down details of the project*
- *Total number of KMs of State Highways improved with details of location*
- *Total number of KMs of State Highway improved with location*
- *Details of contracts awarded with contractors details and copies of such contracts*
- *Details of payments effected to contractors*
- *Details TDS amount and proof of having deposited with IT Department*
- *Details of VAT amount and proof of having deposited with Department concerned*
- *Date of start and completion of projects / expected date of completion*
- *Cost escalation, if any, with details and approvals for the same by CFA*

Chief Engineer, PWD, SHDP, had written a letter to the Project Director, KSHIP on 01.10.2012 to the Project Officer, KSHIP informing that the subject of which the information sought by the Appellant will not come under the purview of their office and therefore transferred the application under section 6(3) of the Act requesting to provide the information directly to the Appellant.

Shri H.S. Prakash Kumar, the then PIO & Project Director, KSHIP, at presently working as Administrator, CADA denied the information sought by Appellant under Sec. 6(1) & 7(1) of the RTI Act, the Appellant filed First Appeal under Sec. 19(1) before the First Appellate Authority, Chief Project Officer, KSHIP. Shri N.S. Ramesh, present PIO & Project Director, Project Implementation Unit, KSHIP made a submission before the Commission that he is not aware about the order passed by the First Appellate Authority.

Shri N.S. Ramesh being a senior officer in the department and working as a PIO & Project Director in Project Implementation Unit, KSHIP should have gone through the file before coming to the Court.

Later on as per the order passed by the Commission dated 03.06.2014 he has provided the complete information on 04.09.2014.

The Appellant contended that the information sought by him under Sec. 6(1) of the RTI Act, has been provided after 23 months, as per the directions of the Commission.

Hence, the Commission noted a delay and denial of timely information by the PIO for 23 months violating the provisions of section 6(1) and 7(1) of the RTI Act 2005.

The Commission perused the explanation offered by the then PIO & Project Director Shri H.S. Prakash Kumar and the date of information provided.

It is noticed that there was a delay of 23 months during the period of both the then Public Information Officer Shri H.S. Prakash Kumar and the present Public Information Officer & Project Director Shri N.S. Ramesh.

As per the decision of the Hon'ble High Court of Karnataka the responsibility has to be fixed on the PIO who was working at the time of receiving the 6(1) application of the Appellant.

Commission observed both the PIOs appears to be casual in providing the information in the routine course and not keeping in mind the mandatory period prescribed by the RTI Act 2005 of the 6(1) & 7(1) to provide the information within 30 days.

In view of the above, the Commission is not convinced with the reason cited by Shri H.S. Prakash Kumar, the then PIO & Project Director KSHIP at present working as Administrator, CADA, Munirabad, in his explanation.

Hence, **Sri. Shankar.R.Patil, State Information Commissioner, power vested under section 20(1) of the Act levies penalty of Rs.25,000/- on Shri H.S. Prakash Kumar, the then PIO & Project Director KSHIP at present working as Administrator, CADA, Munirabad for the delay in providing the required information.**

**Commission also noted that Shri N.S.Ramesh, Public Information Officer and Project Director, KASHIP, has provided the information after the delay of 11 months and therefore Commission directs him to submit his explanation to the Commission for delay in providing the information.**

* * *